**DAY & DATE: SATURDAY, OCTOBER 11th, 2025**

**Matter: Inauguration of First Year B.E. Classes, 2025**

**As appeared in the Newspapers:**

**VIJAYAVANI**
(Page No. 20)

ವಿಜಯವಾಣಿ
ನಂ.1 ಕನ್ನಡ ದಿನಪತ್ರಿಕೆ

## ಸ್ವಾಮಿ ಜಪಾನಂದಜಿ ಸಲಹೆ | ಬಿಎನ್‌ಎಂಐಟಿ ತರಗತಿಗಳ ಉದ್ಘಾಟನೆ

# ವೃತ್ತಿಯೊಂದಿಗೆ ಸಮಾಜಸೇವೆಗೂ ಯತ್ನಿಸಿ

**ಬೆಂಗಳೂರು:** ವಿದ್ಯಾರ್ಥಿಗಳೇ ಭವಿಷ್ಯದ ಮಾಣಿಕ್ಯಗಳು. ಆದ್ದರಿಂದ ಭವಿಷ್ಯದಲ್ಲಿ ಉನ್ನತ ಸ್ಥಾನಮಾನ ದೊರೆತಾಗ ಕೈಲಾದಷ್ಟು ಸಮಾಜ ಸೇವೆ ಮಾಡಲು ಅಣಿಯಾಗಬೇಕೆಂದು ಪಾವಗಡ ಶ್ರೀ ರಾಮಕೃಷ್ಣ ಸೇವಾ ಆಶ್ರಮದ ಸ್ವಾಮಿ ಜಪಾನಂದಜಿ ಹೇಳಿದ್ದಾರೆ.

ಬಿಎನ್‌ಎಂಐಟಿನ ಕಾಲೇಜಿನಲ್ಲಿ ಆಯೋಜಿಸಿದ್ದ ಮೊದಲ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ತರಗತಿಗಳನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಒಳ್ಳೆಯ ನಿರ್ಧಾರಗಳನ್ನು ತೆಗೆದು ಕೊಳ್ಳುವಂತಹ ಸ್ಥಾನ ತಲುಪಬೇಕು. ಅಬ್ದುಲ್ ಕಲಾಂ ಅಂದು ಪೈಲ ನನಸಾಗದಿದ್ದಾಗ ಸೋಲಲಿಲ್ಲ. ಅವರ ಪ್ರಯತ್ನ ಮುಂದುವರಿಸಿದರು. ಮುಂದೆ ರಾಷ್ಟ್ರಪತಿಯಾಗಿ ಸ್ಮರಣೀಯ ಸೇವೆ ಸಲ್ಲಿಸಿದರು. ವಿದ್ಯಾರ್ಥಿಗಳು ಇಂತಹ ಮಹನ್ ಸಾಧಕರ ಆದರ್ಶ ಪಾಲಿಸಿ ಪ್ರಾಮಾಣಿಕತೆ, ಬದ್ಧತೆಯನ್ನು ರೂಢಿಸಿಕೊಳ್ಳಬೇಕು ಎಂದರು.

ಬಿಎನ್‌ಎಂಐಟಿ ಡೀನ್ ಪ್ರೊ. ಈಶ್ವರ್ ಮಾನೆ ಮಾತನಾಡಿ, ಜೀವನದಲ್ಲಿ ಸೋಲು- ಗೆಲುವುಗಳು ಇದ್ದದ್ದೇ. ಸೋತಾಗ ನಾವು ನಮ್ಮನ್ನು ಮತ್ತಷ್ಟು ಅರ್ಥ ಮಾಡಿಕೊಂಡು ಮುಂದೆ ಸಾಗುವುದನ್ನು ಕಲಿಯಬೇಕು. ಈ ಕಾಲೇಜು ಮುಂದಿನ ನಾಲ್ಕು ವರ್ಷ ನಿಮ್ಮ ವ್ಯಕ್ತಿತ್ವ ವಿಕಸನಕ್ಕೆ ದಾರಿ ಮಾಡಿಕೊಡಲಿದೆ. ನೀವು ಕಲಿಕೆ, ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಿ. ಹೊಸ ಆವಿಷ್ಕಾರದ ಬಗ್ಗೆ ಆಲೋಚನೆ ಮಾಡಬೇಕು ಎಂದರು.

ಕಾಲೇಜಿನ ನಿರ್ದೇಶಕ ಟಿ.ಜಿ. ರಾಮಮೂರ್ತಿ, ಪ್ರಾಂಶುಪಾಲ ಡಾ. ಎಸ್.ವೈ. ಕುಲಕರ್ಣಿ, ಉಪ ನಿರ್ದೇಶಕ ಡಾ. ಜಿ.ಎನ್.ಕೃಷ್ಣಮೂರ್ತಿ ಹಾಜರಿದ್ದರು.



**ಬಿಎನ್‌ಎಂಐಟಿ ಕಾಲೇಜಿನಲ್ಲಿ ಆಯೋಜಿಸಿದ್ದ ಮೊದಲ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ತರಗತಿಗಳನ್ನು ಪಾವಗಡದ ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಜಪಾನಂದಜಿ ಉದ್ಘಾಟಿಸಿದರು. ಕಾಲೇಜಿನ ನಿರ್ದೇಶಕ ಟಿ.ಜಿ. ರಾಮಮೂರ್ತಿ, ಪ್ರಾಂಶುಪಾಲ ಡಾ. ಎಸ್.ವೈ. ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು.**

Bengaluru Edition
Oct 11, 2025 Page No. 20
Powered by: erelego.com